


‘ಓಹ್… ಶತಕಗಳ ಶತಕ! ಸಚಿನ್ ಇನ್ನು ನಿರಾಳವಾಗಿ ಉಸಿರಾಡಬಹುದು. ಹಾರ್ದಿಕ ಅಭಿನಂದನೆಗಳು ಸಚಿನ್!’

ಅಮಿತಾಬ್ ಬಚ್ಚನ್ ಸೇರಿದಂತೆ ಹಲವರು ಟ್ವೀಟರ್‌ನಲ್ಲಿ ಹರಿಬಿಟ್ಟ ಇಂಥ ಸಂದೇಶಗಳು, ಪ್ರಾಯಶಃ ಪ್ರತಿಯೊಬ್ಬ ಭಾರತೀಯನ ಮನದಾಳದ ಮಾತನ್ನು ಅತ್ಯಂತ ಪರಿಪೂರ್ಣವಾಗಿ ಹಿಡಿದಿಟ್ಟಿವೆ.

ಮೀರ್‌ಪುರದಲ್ಲಿ ಅವತ್ತು ಸಚಿನ್ ‘ನನ್ನ ತೂಕ ಒಮ್ಮಿಂದೊಮ್ಮೆಲೇ 50 ಕೆ.ಜಿ. ಕಡಿಮೆ ಆದಂತೆ ಭಾಸವಾಗುತ್ತಿದೆ’ ಎಂದೆನ್ನುವಾಗ ಅವರ ಮೇಲೆ ಎಷ್ಟೊಂದು ನಿರೀಕ್ಷೆಯ ಭಾರ ಬಿದ್ದಿತ್ತು ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತಿತ್ತು. ಆದ್ದರಿಂದಲೇ ‘ಶತಕಗಳ ನೂರು’ ಪೂರೈಸಿದಾಗ ಅಬ್ಬರದ ಸಂಭ್ರಮಕ್ಕೆ ಹೋಗದ ಅವರು, ತಣ್ಣಗೆ ಆಕಾಶದತ್ತ ನೋಡುತ್ತಾ, ಹೆಲ್ಮೆಟ್‌ಗೊಂದು ಕಿಸ್ ಕೊಟ್ಟರು. ಆ ಸಂಭ್ರಮದಲ್ಲಿ ಸೂರ್ಯನ ಸುಡುವ ಪ್ರಕಾಶಕ್ಕಿಂತ, ಬೆಳದಿಂಗಳ ತಂಪೇ ತುಂಬಿತ್ತು. ಖಚಾಖಚ್ ಭರ್ತಿಯಾಗಿದ್ದ ಸ್ಟೇಡಿಯಂನಲ್ಲಿ ಅಭಿಮಾನಿಗಳೆಲ್ಲ ಎದ್ದು ನಿಂತು ಚಪ್ಪಾಳೆ ತಟ್ಟುವಾಗ ಲಿಟ್ಲ್ ಮಾಸ್ಟರ್ ಬಿಟ್ಟ ನಿಟ್ಟುಸಿರು ಯಾರಿಗೂ ಕೇಳದಾಯಿತು.

ಆ ಒಂದು ಶತಕಕ್ಕಾಗಿ ಸಚಿನ್ ಕಾದಿದ್ದು ಭರ್ತಿ 368 ದಿನ. ಅಂದರೆ ವರ್ಷದ ಮೇಲೆ ಮೂರು ದಿನ. ಅವರ 99ನೇ ಮತ್ತು ನೂರನೇ ಶತಕದ ಮಧ್ಯೆ 8832 ಗಂಟೆಗಳು ಅಡ್ಡಲಾಗಿ ನಿಂತಿದ್ದವು. ಈ ಅವಧಿಯಲ್ಲಿ 24 ಪಂದ್ಯಗಳನ್ನು (11 ಟೆಸ್ಟ್, 13 ಏಕದಿನ ಪಂದ್ಯ) ಅವರು ಆಡಿದರು.

ಭಾರತೀಯರ ಈ ಪ್ರೀತಿಯ ತೆಂಡ್ಲ್ಯಾನ 99ನೇ ಶತಕ ದಾಖಲಾಗಿದ್ದು 2011ರ ಮಾರ್ಚ್ 12ರಂದು. ನಾಗ್ಪುರದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ನಡೆದ ವಿಶ್ವಕಪ್ ಪಂದ್ಯದಲ್ಲಿ ಅವರು ಈ ಸಾಧನೆ ಮಾಡಿದ್ದರು. ಆಮೇಲೆ ಅವರಿಗೆ ಶತಕ ಗಳಿಸುವ ಅವಕಾಶ ಸಿಕ್ಕೇ ಇಲ್ಲ ಎಂದೇನಿಲ್ಲ. ಮೊಹಾಲಿಯಲ್ಲಿ ನಡೆದ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಅವರು 85 ರನ್ ಗಳಿಸಿ ಔಟಾಗಿದ್ದರು. ಅವತ್ತೇ ಅವರಿಗೆ ಆ ನೂರು ಏನಾದರೂ ಸಿಕ್ಕಿದ್ದರೆ

(42ನೇ ಪುಟ ನೋಡಿ)